# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ



### ‘ಸತ್ಯಾಗ್ರಹಿ ಬ್ರದರ್ಸ್’ ಹರಿಲಾಲನ ಹೊಸ ಉದ್ಯಮ

ಹರಿಲಾಲ ಸಾಕಷ್ಟು ಹೊತ್ತು ಅನ್ಯಮನಸ್ಕನಾಗಿ, ಮೂಟೆಯಂತೆ ಕೂತಿದ್ದ. ಇದುವರೆಗೆ ಮಕ್ಕಳಿಗೆ ತಾಯಿಯ ಬೆಚ್ಚನೆಯ ಅನುಭವ ಲಭಿಸಿತ್ತು. ಈಗ ಅದನ್ನು ಅಪಹರಿಸಲಾಗಿದೆ. ಒಂದು ವೇಳೆ ತಾನು ಮಕ್ಕಳನ್ನು ಇಲ್ಲಿಗೆ ಕರೆತಂದರೆ, ಅವರನ್ನು ತನ್ನಿಂದ ಸೂಕ್ತವಾಗಿ ಆರೈಕೆ ಮಾಡಲು ಸಾಧ್ಯವಿಲ್ಲ, ಅಲ್ಲದೆ ಅವರ ನಿರ್ವಹಣೆಯ ಭಾರವನ್ನೂ ಸಹ ತಾನು ಹೊರಲಾರೆ. ಈಗ ತನ್ನ ಬಳಿ ಯಾವ ಅನುಕೂಲಗಳು ಸಹ ಇಲ್ಲ. ಶೂನ್ಯ ಮನೆ ಅವನನ್ನು ತಿನ್ನಲು ಬರುತ್ತಿದೆ ಎಂದು ಅನ್ನಿಸುತ್ತಿತ್ತು. ಮಕ್ಕಳು ತನ್ನೊಂದಿಗಿದ್ದರೆ ತನಗೂ ಹಿತವೆನಿಸುವುದು, ಅಲ್ಲದೆ ಮಕ್ಕಳು ಸಹ ಸುರಕ್ಷತೆಯ ಭಾವನೆಯನ್ನು ಮನಗಾಣುತ್ತಾರೆ ಎಂಬುದು ಹರಿಲಾಲನಿಗೆ ತಿಳಿದಿತ್ತು. ಆದರೆ ಮಕ್ಕಳ ಪಾಲನೆಪೋಷಣೆ ತುಂಬಾ ಕಷ್ಟದ ಕೆಲಸವಾಗಿತ್ತು. ಹರಿಲಾಲನಿಗೆ ತನ್ನ ಮಿತಿಯ ಅರಿವಿತ್ತು.

ಶೂನ್ಯತೆ ಮತ್ತು ಒಂಟಿತನದಿಂದಾಗಿ ಹರಿಲಾಲ ಅದೆಷ್ಟೋ ದಿನಗಳು ವ್ಯಗ್ರನಾಗಿದ್ದ. ವ್ಯಾಕುಲತೆ ತನ್ನ ಗಡಿಯನ್ನು ದಾಟಿದಾಗ, ಅವನಿಗೆ ಸಾರಾಯಿ ಮಾತ್ರ ಆಸರೆಯಾಗುತ್ತಿತ್ತು. ಸಾರಾಯಿಯ ಆಸರೆ ದಿನೇ ದಿನೇ ಹೆಚ್ಚುತ್ತಿತ್ತು. ಸಾರಾಯಿಯ ಈ ನಶೆಯಲ್ಲಿಯೇ ಅವನಿಗೆ ಆಗಾಗ ಅಕಸ್ಮಾತ್ ವಾಸ್ತವಿಕತೆಯ ಅರಿವಾಗುತ್ತಿತ್ತು. ಆಗ ಅವನು ಗುಲಾಬಳ ಭಾವಚಿತ್ರದ ಎದುರು ಕೂತು ರೋದಿಸುತ್ತಿದ್ದ. ಗುಲಾಬಳನ್ನು ನೋಡಿ ನೋಡಿ ಅಸಹ್ಯಗೊಂಡಾಗ, ಆಫ್ರಿಕಾದಿಂದ ತಂದಿದ್ದ ಬಾಪೂ ಅವರ ಭಾವಚಿತ್ರವನ್ನು ಹಿಡಿದು ಕೂರುತ್ತಿದ್ದ. ಅದೆಷ್ಟೋ ಬಾರಿ ಈ ಭಾವಚಿತ್ರಗಳನ್ನು ತಲೆಕೆಳಗಾಗಿಟ್ಟು, ಸಾರಾಯಿಯ ಕೊನೆಯ ಹನಿಗಳನ್ನು ಗಂಟಲಿನಿಂದ ಕೆಳಗಿಳಿಸಿಕೊಳ್ಳುವಲ್ಲಿ ಮಗ್ನನಾಗಿರುತ್ತಿದ್ದ.

* * *

ಈಗ ಹರಿಲಾಲ ಮನೆಯ ಬಾಡಿಗೆ, ಸಾರಾಯಿ ಖರ್ಚು ಹಾಗೂ ರಾಜಕೋಟದಲ್ಲಿ ಮಕ್ಕಳ ಜೀವನ ನಿರ್ವಹಣೆಗೆ ಕೊಡಬೇಕಾದ ಹಣ– ಇವೆಲ್ಲದರ ಚಕ್ರವ್ಯೂಹದಲ್ಲಿ ಸಿಲುಕಿದ್ದ. ಈಗ ಕೈಕಟ್ಟಿ ಕೂರುವಂತೆಯೂ ಇರಲಿಲ್ಲ. ಅವನು ಗುಲಾಬಳೊಂದಿಗೆ ಜೀವನವನ್ನು ಹೆಚ್ಚಾಗಿ ಕಳೆದಿರಲಿಲ್ಲ, ಈಗ ಅವಳಿಲ್ಲದೆ ಜೀವನವನ್ನು ಕಳೆಯಬೇಕಿತ್ತು, ಅಲ್ಲದೆ ಮಕ್ಕಳನ್ನು ದೊಡ್ಡವರನ್ನಾಗಿ ಮಾಡಬೇಕಿತ್ತು.

ಅತ್ತ ಮಹಾಯುದ್ಧ ಈಗ ಮುಗಿದಿತ್ತು. ಈಗ ವ್ಯಾಪಾರವಹಿವಾಟುಗಳು ಕ್ರಮೇಣ ಸಾಮಾನ್ಯ ಸ್ಥಿತಿಗೆ ಬರುತ್ತಿದ್ದವು. ಹೀಗೆ ವ್ಯವಸ್ಥಿತವಾಗುತ್ತಿರುವ ಬಜಾರಿನಲ್ಲಿ ಒಂದು ಸರಿಯಾದ ಹಾದಿ ಹಿಡಿದು ಹೊಸದಾಗಿ ಕೆಲಸ ಮತ್ತು ವ್ಯಾಪಾರವನ್ನು ಮಾಡುವ ಉದ್ದೇಶದಿಂದ ಹರಿಲಾಲ ತನ್ನ ಸುತ್ತಮುತ್ತಲಿನ ವಾತಾವರಣವನ್ನು ಗಮನಿಸಿದ. ಯುದ್ಧದಲ್ಲಿ ಧ್ವಂಸಗೊಂಡ ಯೂರೋಪಿನ ನಗರಗಳಲ್ಲಿ ಕಚ್ಚಾ ಮಾಲುಗಳಿಗೆ ಬೇಡಿಕೆಯಿತ್ತು. ಆ ಮಾಲುಗಳನ್ನು ಇಲ್ಲಿಂದಲೇ ಪೂರೈಸಬೇಕಿತ್ತು. ಹರಿಲಾಲ ಆಫ್ರಿಕಾದಲ್ಲಿದ್ದಾಗ ಯೂರೋಪಿನ ದೇಶಗಳಲ್ಲಿರುವ ಅನೇಕ ಜನರೊಂದಿಗೆ ಅವನ ಪರಿಚಯವಾಗಿತ್ತು. ಅಲ್ಲದೆ ನರೋತ್ತಮದಾಸರ ಕಚೇರಿಯಲ್ಲಿ ಕೆಲಸ ಮಾಡುವಾಗ ಅನೇಕ ಜನರ ಸಂಪರ್ಕದಲ್ಲೂ ಇದ್ದ. ಯೂರೋಪಿನಲ್ಲಿರುವವರ ಸಂಪರ್ಕದ ಮೂಲಕ ಇಲ್ಲಿಯ ಕಚ್ಚಾ ಮಾಲೊಂದನ್ನು ರಫ್ತು ಮಾಡಿದರೆ ಹಾಗೂ ಅದರ ಬದಲು ಇಲ್ಲಿ ಕೊರತೆಯಿರುವ ಮಾಲನ್ನು ಆಮದು ಮಾಡಿಕೊಂಡರೆ ಈ ವ್ಯಾಪಾರದಲ್ಲಿ ಲಾಭ ಬರುತ್ತದೆ ಎಂದು ಹರಿಲಾಲ ಯೋಚಿಸುತ್ತಿದ್ದ.

* * *

ನಿರುದ್ಯೋಗಿಯಾಗಿದ್ದ ಈ ದಿನಗಳಲ್ಲಿ ಹರಿಲಾಲನಿಗೆ ಅಕಸ್ಮಾತ್ ಪರಾಗರ ಭೇಟಿಯಾಯಿತು. ಪರಾಗರು ಕೆಲವು ವರ್ಷ ಆಫ್ರಿಕಾದಲ್ಲಿ ಬಾಪೂ ಅವರೊಂದಿಗಿದ್ದ ನಂತರ ಮರಳಿ ಹಿಂದೂಸ್ತಾನಕ್ಕೆ ಬಂದಿದ್ದರು. ಪರಾಗರನ್ನು ಭೇಟಿಯಾಗಿ ಹರಿಲಾಲ ತುಂಬಾ ಸಂತೋಷಗೊಂಡ. ಹರಿಲಾಲನ ಪರಿಸ್ಥಿತಿಗಳ ಬಗ್ಗೆ ಪರಾಗರು ಸಣ್ಣಪುಟ್ಟ ಸುದ್ದಿಗಳನ್ನು ಕೇಳಿದ್ದರು. ಆದರೆ ಅವರೇ ಸ್ವತಃ ಹರಿಲಾಲನನ್ನು ನೋಡಿದಾಗ ಅವರಿಗೆ ತುಂಬಾ ದುಃಖವಾಯಿತು.

‘ಹರಿಲಾಲ!’ ಪರಾಗರು ಹರಿಲಾಲನಿಗೆ ಧೈರ್ಯವನ್ನು ತುಂಬಿದರು, ‘ಆದದ್ದು ಆಗಿ ಹೋಯಿತು. ಈಗ ನೀನು ಹೊಸದಾಗಿ ಕೆಲಸದಲ್ಲಿ ತೊಡಗಿಸಿಕೋ. ಅದೃಷ್ಟದ ಎದುರು ಅಡೆತಡೆಗಳು ದೂರವಾಗಬಹುದು.’

‘ಪರಾಗ್ ಭೈಯ್ಯಾಜಿ!’ ಹರಿಲಾಲ ತನ್ನ